**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1011/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**

**ದಿನಾಂಕಃ 26.11.2025** **ಸಿಡಬ್ಲ್ಯೂ.10**

| | |
|---|---|
| ಹೆಸರು | ಕೆಂಚಮ್ಮ |
| ತಂದೆ ಹೆಸರು | ಮಲ್ಲೇಶಪ್ಪ |
| ವಯಸ್ಸು | 60 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಜರೀಕಟ್ಟೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1,8,9,11 ಮತ್ತು 12 ರವರ ಪರಿಚಯವಿದೆ. ಮೃತ ಲಕ್ಷ್ಮಮ್ಮನ ಪರಿಚಯವಿದೆ. ಆರೋಪಿ ಪರಿಚಯವಿದೆ. ಈಗ ಸುಮಾರು 17–18 ತಿಂಗಳ ಹಿಂದೆ ನಾವು ಆರೋಪಿಯ ಪ್ಯಾಸೆಂಜರ್ ಆಟೋದಲ್ಲಿ ದಾವಣಗೆರೆಗೆ ಶವಸಂಸ್ಕಾರಕ್ಕೆ ಹೋಗಿ ಮರಳಿ ಹರಿಹರಕ್ಕೆ ಬರುವ ಸಂದರ್ಭದಲ್ಲಿ ಸಂಜೆ 3.00 ಗಂಟೆ ಸುಮಾರು ಮಿಟ್ಲಕಟ್ಟೆ ಹತ್ತಿರ ಆಟೋ ಜೋರಾಗಿ ಹೋಗುತ್ತಿದ್ದಾಗ ಒಂದು ನಾಯಿ ಅಡ್ಡ ಬಂದು ನಮ್ಮ ಆಟೋ ಪಲ್ಟಿಯಾಗಿ ಅಪಘಾತ ಸಂಭವಿಸಿರುತ್ತದೆ. ಸದರಿ ಅಪಘಾತದಲ್ಲಿ ಲಕ್ಷ್ಮಮ್ಮ ತೀರಿಕೊಂಡಿರುತ್ತಾರೆ. ನನಗೆ ಮೂಗಿಗೆ, ಭುಜಕ್ಕೆ ಪೆಟ್ಟಾಗಿತ್ತು. ಚಾಸಾ.11 ರವರಿಗೆ ಎದೆಗೆ ಪೆಟ್ಟಾಗಿತ್ತು. ಚಾಸಾ.1 ಸಾಕಮ್ಮನವರಿಗೆ ತಲೆಗೆ ಪೆಟ್ಟಾಗಿತ್ತು. ಮೃತ ಲಕ್ಷ್ಮಮ್ಮನವರಿಗೆ ಎದೆ ಭಾಗಕ್ಕೆ ಪೆಟ್ಟು ಬಿದ್ದಿದ್ದು ನಂತರ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಅಪಘಾತವಾದ ನಂತರ ಮೃತ ಲಕ್ಷ್ಮಮ್ಮ ಚಾಸಾ.1 ರವರನ್ನು ದಾವಣಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮನ್ನು ಚಿಟಗೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ವಿಚಾರವಾಗಿ ಚಾಸಾ.1 ರವರು ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆಟೋ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಅವರ ಗುರುತಿಸುವಿಕೆ ಬಗ್ಗೆ ಆಕ್ಷೇಪಣೆ ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದಃ**

ನಾನು ಚಾಸಾ.8,9,11 ಮತ್ತು 12 ಸಂಬಂಧಿಕರು ಎಂದರೆ ಸರಿ. ಆಟೋವನ್ನು ನಾವೇ ಬಾಡಿಗೆ ಮಾಡಿಕೊಂಡು ಹೋಗಿದ್ದೆವು. ಸದರಿ ಆಟೋದಲ್ಲಿ ನಾವು ಸುಮಾರು 12 ಜನ ಇದ್ದೆವು. ಆಟೋದಲ್ಲಿ ನಾನು ಮಧ್ಯದ ಸೀಟಿನಲ್ಲಿ ಕುಳಿತಿದ್ದೆನು. ಮಧ್ಯದ ಸೀಟಿನಲ್ಲಿ ನಾವು 4 ಜನ ಕುಳಿತಿದ್ದೆವು. ನಾನು ಕುಳಿಳ ಸ್ಥಳದಿಂದ ರಸ್ತೆ

ಕಾಣುವುದಿಲ್ಲ ಚಾಲಕನಿಗೆ ಮಾತ್ರ ಕಾಣಿಸುತ್ತದೆ ಎಂದರೆ ಸರಿ. ಅಪಘಾತವಾದ ನಿಖರವಾದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಆಟೋದಲ್ಲಿ ಬಹಳ ಜನ ಇದ್ದುದರಿಂದ ನಿಧಾನವಾಗಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ನನಗೆ ನನ್ನ ಜೊತೆ ಆಟೋದಲ್ಲಿ ಇದ್ದ ಪ್ರಯಾಣಿಕರು ನಾಯಿ ಅಡ್ಡ ಬಂದ ಬಗ್ಗೆ ತಿಳಿಸಿರುತ್ತಾರೆ. ನಾಯಿ ಏಕಾಏಕಿ ಅಡ್ಡ ಬಂದಿದ್ದರಿಂದ ನಾಯಿಯನ್ನು ಉಳಿಸಲು ಹೋಗಿ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಅಪಘಾತ ಸಂಭವಿಸಿದ ರಸ್ತೆ ಕೆಟ್ಟು ಹೋಗಿತ್ತು ಎಂದರೆ ಸರಿ. ಸದರಿ ರಸ್ತೆಯಲ್ಲಿ ತಗ್ಗು ಗುಂಡಿಗಳು ಇರುವುದರಿಂದ ಚಾಲಕರು ಆಟೋವನ್ನು ಚಲಾಯಿಸುತ್ತಾರೆ ಎಂದರೆ ಸರಿ. ಪೊಲೀಸರಿಗೆ ಹೇಳಿಕೆ ನೀಡಿದ ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ. ದೂರನ್ನು ಯಾರು ಯಾವಾಗ ನೀಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನನ್ನ ಹೇಳಿಕೆ ಪಡೆದ ಪೊಲೀಸರ ಹೆಸರು ಪದನಾಮೆ ನನಗೆ ಗೊತ್ತಿಲ್ಲ. ಆಟೋ ಚಾಲಕನಿಗೂ ಸಹ ಅಪಘಾತದಿಂದ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ಚಾಲಕನ ಪಕ್ಕದಲ್ಲಿ ಭಾಗ್ಯಮ್ಮ ಚಾಸಾ.12 ಮತ್ತು ಚಾಸಾ.1 ರವರು ಕುಳಿತಿದ್ದರು. ಚಾಸಾ.1 ರವರೇ ಆರೋಪಿ ಆಟೋವನ್ನು ಬಾಡಿಗೆ ಪಡೆದಿದ್ದರಿಂದ ಆರೋಪಿ ವಿರುದ್ಧ ಯಾವುದೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿಲ್ಲ. ಆರೋಪಿ ತಪ್ಪಿನಿಂದ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಏಕಾಏಕಿ ನಾಯಿ ಅಡ್ಡ ಬಂದಿದ್ದರಿಂದ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಪರಿಹಾರ ಧನ ಪಡೆಯುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ .**

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ